

ನಿರ್ಮಾಣದ ಹಂತದಲ್ಲಿರುವ ದೇವಸ್ಥಾನದ ಕಟ್ಟಡ

# ರಾಮಕೃಷ್ಣ ಮಿಷನ್, ಕಡಪ

(ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ ೭೧೧ ೨೦೨ ಇದರ ಶಾಖಾ ಕೇಂದ್ರ)
ಸಿಟಿ ಕೇಂದ್ರ : ರಾಮಕೃಷ್ಣ ಮಠ, ಟ್ರಂಕ್ ರೋಡ್, ಕಡಪ ೫೧೬ ೦೦೧
Ph : 241633 Email: kadapamath@yahoo.com Web Site: www.rkm-kadapa.org

## ಭಗವಾನ್ ಶ್ರೀರಾಮಕೃಷ್ಣರಿಗೆ ನಿವೇದಿತವಾದ ವಿಶ್ವಭಾವೈಕ್ಯ ದೇವಮಂದಿರ

ದಿವ್ಯತ್ರಯರ ಅನುಗ್ರಹದಿಂದ ಶ್ರೀರಾಮಕೃಷ್ಣರಿಗೆ ಮುಡಿಪಾದ ವಿಶ್ವಭಾವೈಕ್ಯ ಮಂದಿರದ ಕಟ್ಟಡ ನಿರ್ಮಾಣವು ಕಡಪ ಆಶ್ರಮದಲ್ಲಿ ಪೂರ್ಣವಾಗುತ್ತಲಿದೆ. ನಿಮಗೆ ಈಗಾಗಲೆ ಗೊತ್ತಿರುವ ಹಾಗೆ, ಈ ಮಂದಿರದ ಅಂದಾಜು ವೆಚ್ಚ ರೂ. ೧೪೦ ಲಕ್ಷಗಳು. ಆದರೆ ಸಂಪೂರ್ಣವಾಗುವ ವೇಳೆಗೆ ನಾವು ಇನ್ನೂ ೨೦ ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಬೇಕಾಗಿದೆ. ಈ ಮಂದಿರದ ಉದ್ಘಾಟನೆ ಮತ್ತು ಭಗವಾನ್ ಶ್ರೀರಾಮಕೃಷ್ಣರ ಅಮೃತಶಿಲೆಯ ವಿಗ್ರಹದ ಪ್ರತಿಷ್ಠಾಪನೆಯನ್ನು ೨೦೧೨, ನವೆಂಬರ್ ೨೨ರ ಪವಿತ್ರ ಜಗದ್ಧಾತ್ರಿ ಪೂಜೆಯ ದಿನದಂದು ನೆರವೇರಿಸಲು ಸಂಕಲ್ಪಿಸಲಾಗಿದೆ. ಈ ಸಂದರ್ಭ, ನವೆಂಬರ್ ೨೦ರಿಂದ ೨೩ರವರೆಗೆ ೪ ದಿನಗಳ ಕಾಲ ಮಹೋತ್ಸವವನ್ನು ಆಯೋಜಿಸಲಾಗಿದೆ. ದಿವ್ಯತ್ರಯರ ಭಕ್ತರು ಮತ್ತು ಹಿತೈಷಿಗಳಿಗೆ, ಈ ಸಮಾರಂಭದಲ್ಲಿ ಭಾಗವಹಿಸಲು ಹಾರ್ದಿಕವಾದ ಸುಸ್ವಾಗತವನ್ನು ಬಯಸುತ್ತೇವೆ.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಈ ಮಹೋತ್ಸವದಲ್ಲಿ ದಿವ್ಯ ಸಾನ್ನಿಧ್ಯವನ್ನು ವಹಿಸಿ, ಪೂಜಾಮಂದಿರದ ಉದ್ಘಾಟನೆಯನ್ನು ನೆರವೇರಿಸಲು ದಯವಿಟ್ಟು ಒಪ್ಪಿಕೊಂಡಿರುತ್ತಾರೆ. ಸುಮಾರು ೨೫೦ ಸಾಧು ಬ್ರಹ್ಮಚಾರಿಗಳು ಮತ್ತು ೫೦೦೦ ಭಕ್ತರು (ಕಡಪ ನಗರದ ಹೊರಗಿನಿಂದ ಸುಮಾರು ೨೦೦೦ ಭಕ್ತರು ಆಗಮಿಸುವ ನಿರೀಕ್ಷೆಯಿದೆ) ಈ ಮಹೋತ್ಸವದಲ್ಲಿ ಪಾಲ್ಗೊಳ್ಳುವರು. ವಾಸ್ತುಹೋಮ, ವಿಶೇಷ ಪೂಜೆ, ಸಾಧು ಬ್ರಹ್ಮಚಾರಿಗಳು ಮತ್ತು ಭಕ್ತರನ್ನು ಒಳಗೊಂಡ ಶೋಭಾಯಾತ್ರೆ, ಹಿರಿಯ ಸಂನ್ಯಾಸಿಗಳು ಮತ್ತು ಇತರ ಗಣ್ಯವ್ಯಕ್ತಿಗಳಿಂದ ಪ್ರವಚನಗಳು, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಸಂಚಿಕೆಯ ಬಿಡುಗಡೆ – ಇವು ಮಹೋತ್ಸವದ ಅಂಗಗಳಾಗಿರುತ್ತವೆ. ಈ ಕಾರ್ಯಕ್ರಮಗಳಿಗೆ ಒಟ್ಟಾರೆ ರೂ. ೪೫ ಲಕ್ಷಗಳಷ್ಟು ಖರ್ಚಾಗುವುದು ಎಂದು ಅಂದಾಜು ಮಾಡಲಾಗಿದೆ. ಈ ಪವಿತ್ರಕಾರ್ಯದಲ್ಲಿ ನಮ್ಮೊಡನೆ ತನು ಮನ ಧನಗಳ ಮೂಲಕ ಸಹಕರಿಸಿ, ಈ ಸಮಾರಂಭವನ್ನು ಅದ್ದೂರಿಯಾಗಿ ಮತ್ತು ಸ್ಮರಣೀಯವಾಗಿ ನಡೆಸಿಕೊಡಬೇಕೆಂದು ಮತ್ತು ಆ ಮೂಲಕ ದಿವ್ಯತ್ರಯರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ನಮ್ಮೆಲ್ಲ ಭಕ್ತರಿಗೆ ಮತ್ತು ಹಿತೈಷಿಗಳಿಗೆ ನಮ್ಮ ವಿನಮ್ರ ವಿನಂತಿ.

ದೇಣಿಗೆಗಳನ್ನು 'Ramakrishna Mission, Kadapa' ಹೆಸರಿಗೆ ಬರೆದ ಚೆಕ್ ಮತ್ತು ಡ್ರಾಫ್ಟ್‌ಗಳ ಮೂಲಕ ಮೇಲಿನ ವಿಳಾಸಕ್ಕೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ. ತಾವು State Bank of India ದಲ್ಲಿರುವ ನಮ್ಮ ಖಾತೆಗೆ ನೇರವಾಗಿ E – transfer ಮಾಡುವ ಮೂಲಕವೂ ನಿಮ್ಮ ಕೊಡುಗೆಗಳನ್ನು ಸಲ್ಲಿಸಬಹುದು. ಅದರ ವಿವರಗಳು ಹೀಗಿವೆ: Ramakrishna Mission A/c No 30186936408 at SBI, RIMS Branch, Cuddapah. Bank code : SBIN 0010107. ತಾವು ಹಣವನ್ನು E- transfer ಮಾಡುವಾಗ ದಯವಿಟ್ಟು ನಿಮ್ಮ ಸಂಪೂರ್ಣ ಹೆಸರು ಮತ್ತು ವಿಳಾಸಗಳನ್ನೂ, ಹಾಗೆಯೇ ತಾವು ಸಲ್ಲಿಸುತ್ತಿರುವ ಮೊಬಲಗಿನ ವಿವರವನ್ನೂ ನಮಗೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ. ಇದರಿಂದಾಗಿ ನಮ್ಮ ಖಾತೆಯಲ್ಲಿ ಆ ಹಣವನ್ನು ಸ್ವೀಕರಿಸಲು ಮತ್ತು ಅಧಿಕೃತ ರಸೀದಿಯನ್ನು ನಿಮಗೆ ಕಳುಹಿಸಿಕೊಡಲು ಅನುಕೂಲವಾಗುತ್ತದೆ.

ಸ್ವಾಮಿ ಆತ್ಮವಿದಾನಂದ
ಕಾರ್ಯದರ್ಶಿಗಳು